ಮಾನ್ಯ ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ ರವರ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಸಭಾಭವನದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಧಾರವಾಡ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಧಾರವಾಡ ವಿಭಾಗ, ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಉಪ ನಿರ್ದೇಶಕರು, ಭೂ ದಾಖಲೆ, ಉಪ ವಿಭಾಗಾಧಿಕಾರಿಗಳು, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ಹಾಗೂ ಎಲ್ಲಾ ತಾಲ್ಲೂಕಿನ ತಹಶೀಲ್ದಾರು, ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಇತರ ಅಧಿಕಾರಿಗಳು ಒಳಗೊಂಡ್ಡಂತೆ ದಿನಾಂಕ: 27-03-2025 ರಂದು ಸಂಜೆ 4.00 ಗಂಟೆಗೆ ನಡೆಸಿದ ಜಿಲ್ಲಾ ತಜ್ಞ ಸಮಿತಿಯ (District Expert Committee) ಸಭೆಯ ನಡಾವಳಿಗಳು

**ಉಪಸ್ಥಿತರು:**

1. ಶ್ರೀಮತಿ ದಿವ್ಯ ಪ್ರಭು. ಜಿ.ಆರ್.ಜಿ ಭಾ.ಆ.ಸೇ, ಮಾನ್ಯ ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ.
2. ಶ್ರೀ ಭುವನೇಶ ಪಾಟೀಲ, ಭಾ.ಆ.ಸೇ, ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಧಾರವಾಡ
3. ಶ್ರೀ ವಿವೇಕ ಟಿ ಕವರಿ, ಕ.ಅ.ಸೇ, ಉಪ ಅರಣ್ಯ ಸಂರಕ್ಷಣಾಧಿಕಾರಿ, ಪ್ರಾದೇಶಿಕ ವಿಭಾಗ, ಧಾರವಾಡ
4. ಶ್ರೀ ಶಾಲಂ ಹುಸೇನ್, ಉಪ ವಿಭಾಗಾಧಿಕಾರಿಗಳು, ಧಾರವಾಡ.
5. ಶ್ರೀ ಬಿ ಎಸ್ ಮೂಗನೂರಮಠ, ಉಪ ಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತ್, ಧಾರವಾಡ
6. ಶ್ರೀ ಮೋಹನ ಶಿವಣ್ಣವರ, ಉಪ ನಿರ್ದೇಶಕರು, ಭೂ ದಾಖಲೆ, ಧಾರವಾಡ
7. ಶ್ರೀ ಕಾಶಿನಾಥ ಭದ್ರಣ್ಣವರ, ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಧಾರವಾಡ.
8. ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ಧಾರವಾಡ ರವರ ಪರವಾಗಿ ಶ್ರೀಮತಿ. ಲಲಿತಾ ಹಾವೇರಿ ಪ್ರ.ವ್ಯ.
9. ಶ್ರೀ ಮಂಜುನಾಥ ದಾಸಪ್ಪನವರ, ತಹಶೀಲ್ದಾರ ಅಣ್ಣಿಗೇರಿ
10. ಶ್ರೀ ಬಸವರಾಜ ಬೆಣ್ಣಿಶಿರೂರು, ತಹಶೀಲ್ದಾರ ಅಳ್ನಾವರ & ಕಲಘಟಗಿ.
11. ಶ್ರೀ. ಎಸ್.ಪಿ. ಹೆಬ್ಬಳ್ಳಿ, ತಹಶೀಲ್ದಾರ ಹುಬ್ಬಳ್ಳಿ.
12. ಶ್ರೀ ಆರ್ ಎಸ್ ಉಪ್ಪಾರ, ವಲಯ ಅರಣ್ಯಾಧಿಕಾರಿ, ಹುಬ್ಬಳ್ಳಿ, ವಲಯ,
13. ಶ್ರೀ ಕಿರಣಕುಮಾರ ಕರತಂಗಿ, ವಲಯ ಅರಣ್ಯಾಧಿಕಾರಿ, ಧಾರವಾಡ ವಲಯ.
14. ಶ್ರೀ ಅರುಣಕುಮಾರ ಅಷ್ಟಗಿ, ವಲಯ ಅರಣ್ಯಾಧಿಕಾರಿ, ಕಲಘಟಗಿ ವಲಯ.
15. ಶ್ರೀಮತಿ ಶಕುಂತಲ, ವಲಯ ಅರಣ್ಯಾಧಿಕಾರಿ, ಅಳ್ನಾವರ ವಲಯ.
16. ಶ್ರೀ ಎಸ್. ಬಿ. ಮಾಲಾಪುರ, ವಲಯ ಅರಣ್ಯಾಧಿಕಾರಿ, ಸರ್ವೇ ಧಾರವಾಡ
17. ಶ್ರೀ ಜಿ. ಎಮ್ ಕಂದಕರ, ಕಾರ್ಯನಿರ್ವಾಹಕ ಅಧಿಕಾರಿ, ಧಾರವಾಡ ತಾ.ಪಂ
18. ಶ್ರೀ. ಜಗದೀಶ ಎಚ್. ಕಾರ್ಯನಿರ್ವಾಹಕ ಅಧಿಕಾರಿ, ನವಲಗುಂದ ತಾ.ಪಂ

*********

**ಸಭೆಗೆ ಸೇರಿದ್ದ ಎಲ್ಲ ಅಧಿಕಾರಿಗಳಿಗೆ ಹಾಗೂ ಸಭಾಧ್ಯಕ್ಷರಿಗೆ ಸಮಿತಿ ಪರವಾಗಿ ಸಮಿತಿಯ ಸಂಚಾಲಕರಾದ ಶ್ರೀ ವಿವೇಕ ಟಿ ಕವರಿ, ಕ.ಅ.ಸೇ, ಉಪ ಅರಣ್ಯ ಸಂರಕ್ಷಣಾಧಿಕಾರಿ, ಪ್ರಾದೇಶಿಕ ವಿಭಾಗ, ಧಾರವಾಡ ರವರು ಸ್ವಾಗತಿಸಿದರು.**

ಮಾನ್ಯ ಅಧ್ಯಕ್ಷರು, ಸಭೆಯ ಬಗ್ಗೆ ವಿಷಯ ಪ್ರಸ್ತುತ ಪಡಿಸಲು ಆದೇಶಿಸಿದ ಮೇರೆಗೆ ಶ್ರೀ ವಿವೇಕ ಟಿ ಕವರಿ, ಕ.ಅ.ಸೇ, ಉಪ ಅರಣ್ಯ ಸಂರಕ್ಷಣಾಧಿಕಾರಿ, ಪ್ರಾದೇಶಿಕ ವಿಭಾಗ, ಧಾರವಾಡ ರವರು ಈ ಕೆಳಕಂಡಂತೆ ಸಭೆಯನ್ನುದ್ದೇಶಿಸಿ ಪ್ರಾಸ್ತಾವಿಕ ಮಾತುಗಳನ್ನಾಡಿದರು.

ಸದರಿ ಸಮಿತಿಯ ಉದ್ದೇಶಗಳನ್ನು ತಿಳಿಸುತ್ತಾ, ಸಮಿತಿಯು ಮಾನ್ಯ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ- FEE - 185- FAF 2011 Bengaluru ದಿನಾಂಕ 06-03-2025 ರ ಆದೇಶದಂತೆ, ಜಿಲ್ಲಾ ತಜ್ಞ ಸಮಿತಿಯ ರಚನೆ ಮಾಡಲು ಆದೇಶಿಸಿದ್ದರಿಂದ ನಾವೆಲ್ಲರೂ ಸಭೆ ಸೇರಿದ್ದು ಇರುತ್ತದೆ. ಸದರಿ ಆದೇಶ, ವನ್ ಸಂರಕ್ಷಣ ಅಧಿನಿಯಮ, 1980 ಹಾಗೂ ನಿಯಮಗಳು, 2023 ರ ಪ್ರಕಾರ ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶ ರಿಟ್ ಪಿಟೀಶನ್ ಸಂ: 1164 (2023), ಇವೆಲ್ಲರ ಪ್ರಕಾರ

1. ಯಾವುದೇ ಅರಣ್ಯ ಕಾಯ್ದೆಯ ಮುಖಾಂತರ ಅಧಿಸೂಚನೆಯಾಗಿರುವ ಅರಣ್ಯ ಪ್ರದೇಶಗಳನ್ನ
2. ಅಧಿಸೂಚನೆಯಾಗದೇ ಇನ್ನುಳಿದ ಯಾವುದೇ ಸರ್ಕಾರಿ ದಾಖಲೆಗಳಲ್ಲಿ ದಿನಾಂಕ: 25-10-1980 ಅಥವಾ ಅದಕ್ಕಿಂತ ಪೂರ್ವದಲ್ಲಿ ಅರಣ್ಯವೆಂದು ದಾಖಲಿರುವ ಅರಣ್ಯ ಪ್ರದೇಶಗಳು (Provided that the provisions of this clause shall not apply to such land, which has been changed from forest use to use for non-forest purpose on or before the 12th December, 1996 in pursuance of an order, issued by any authority authorized by a State Government or Union territory Administration in that behalf.)
3. ಹಾಗೂ ಅರಣ್ಯ ತರಹದ ಪ್ರದೇಶಗಳು (Dictionary Meaning) ಡೀಮ್ಡ್ ಅರಣ್ಯ ಪ್ರದೇಶಗಳು.

ಇವೆಲ್ಲರ ಕ್ರೋಡಿಕೃತ ದಾಖಲೆಗಳನ್ನು ತಯಾರಿಸಿ, ಜಿಲ್ಲಾ ತಜ್ಞ ಸಮಿತಿಯಲ್ಲಿ ಮಂಡಿಸಿ, ಅನುಮೋದನೆ ಪಡೆದು, ಕಂದಾಯ ಪ್ರಾದೇಶಿಕ ವಿಭಾಗ ಮಟ್ಟದ ಸಮಿತಿಗೆ ಸಲ್ಲಿಸಲು ಸೂಚಿಸಿದ್ದು ಇರುತ್ತದೆ. ಅದರನ್ವಯ, ಮಾನ್ಯ ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ, ಕರ್ನಾಟಕ ಸರ್ಕಾರ ರವರು ದಿನಾಂಕ: 21-03-2025 ರಂದು ನಡೆಸಿದ ಕಾರ್ಯಾಗಾರದಲ್ಲಿ ತಿಳಿಸಿದಂತೆ, ಸದರಿ ಕೆಲಸದ ಪ್ರಥಮ ಭಾಗವಾಗಿ, ಯಾವುದೇ ಅರಣ್ಯ ಕಾಯ್ದೆಯ ಮುಖಾಂತರ ಅಧಿಸೂಚನೆಯಾಗಿರುವ ಅರಣ್ಯ ಪ್ರದೇಶಗಳ ಗ್ರಾಮವಾರು ಸರ್ವೇ ನಂಬರ್‌ವಾರು ವಿಸ್ತೀರ್ಣದ ಪಟ್ಟಿಯನ್ನು ತಯಾರಿಸಿ ಸಮಿತಿ ಮುಂದೆ ಮಂಡಿಸಲಾಗುವುದು ಉಪ ಅರಣ್ಯ ಸಂರಕ್ಷಣಾಧಿಕಾರಿ, ಧಾರವಾಡ ವಿಭಾಗ ರವರು ಸಭೆಗೆ ಮಾಹಿತಿ ನೀಡಿದರು. ಸದರಿ ಮಾಹಿತಿಯನ್ನು ತಯಾರಿಸಿ ಮುಂದಿನ ಸಭೆಯಲ್ಲಿ ಸಲ್ಲಿಸಲು ಸಮಿತಿಯು ಉಪ ಅರಣ್ಯ ಸಂರಕ್ಷಣಾಧಿಕಾರಿ, ಧಾರವಾಡ ರವರಿಗೆ ನಿರ್ದೇಶನ ನೀಡಲಾಯಿತು.

**ಕ್ರಮ: ಉಪ ಅರಣ್ಯ ಸಂರಕ್ಷಣಾಧಿಕಾರಿ, ಪ್ರಾದೇಶಿಕ ವಿಭಾಗ, ಧಾರವಾಡ ಇವರಿಗೆ ಅಧಿಸೂಚನೆಯಾಗಿರುವ ಅರಣ್ಯ ಪ್ರದೇಶಗಳ ಗ್ರಾಮವಾರು ಸರ್ವೇ ನಂಬರ್‌ವಾರು ವಿಸ್ತೀರ್ಣದ ಪಟ್ಟಿಯನ್ನು ಕ್ರೋಡಿಕರಿಸಿ ಸಲ್ಲಿಸುವುದು.**

ಮುಂದುವರೆದು, ಉಪ ಅರಣ್ಯ ಸಂರಕ್ಷಣಾಧಿಕಾರಿ, ಧಾರವಾಡ ರವರು ಅಧಿಸೂಚನೆಯಾಗದೇ ಇನ್ನುಳಿದ ಯಾವುದೇ ಸರ್ಕಾರಿ ದಾಖಲೆಗಳಲ್ಲಿ ದಿನಾಂಕ: 25-10-1980 ಅಥವಾ ಅದಕ್ಕಿಂತ ಪೂರ್ವದಲ್ಲಿ ಅರಣ್ಯವೆಂದು ದಾಖಲಿರುವ ಅರಣ್ಯ ಪ್ರದೇಶಗಳನ್ನು ಸಮಿತಿಯ ಎಲ್ಲ ಸದಸ್ಯರಿಗೆ ತಯಾರಿಸಿ ಸಮಿತಿಗೆ ಸಲ್ಲಿಸಬೇಕೆಂದು ಸಭೆಗೆ ಮಾಹಿತಿ ನೀಡಿದರು. (ಉದಾಹರಣೆಗೆ, ಜಿಲ್ಲಾಧಿಕಾರಿಗಳು, ಕರ್ನಾಟಕ ಭೂ ಕಂದಾಯ

ಅಧಿನಿಯಮದ ಪ್ರಕಾರ ಅರಣ್ಯ ಇಲಾಖೆಗೆ ನೀಡಿರುವ ಪ್ರದೇಶಗಳು, ಸರ್ವೆ ದಾಖಲೆಗಳಲ್ಲಿ ಅರಣ್ಯ ಎಂದು ನಮೂದಾಗಿರುವ ಅರಣ್ಯ ಪ್ರದೇಶಗಳು, ಪಹಣಿ ಪತ್ರಿಕೆಗಳಲ್ಲಿ ಅರಣ್ಯ, ಜಂಗಲ್, ಕಾಡು, ಫಾರೆಸ್ಟ್ ಇತ್ಯಾದಿ ಎಂದು ನಮೂದಾಗಿರುವ ದಾಖಲೆಗಳು ಇತ್ಯಾದಿ). ಸದರಿ ಮಾಹಿತಿಗಳನ್ನು ಕ್ರೋಢಿಕರಿಸಿ, ಪಟ್ಟಿ ತಯಾರಿಸಿ ಮುಂದಿನ ಸಭೆಯಲ್ಲಿ ಸಲ್ಲಿಸಲು ಸಮಿತಿಯ ವಿವಿಧ ಇಲಾಖೆಯ ಎಲ್ಲ ಅಧಿಕಾರಿಗಳಿಗೆ ಸಮಿತಿಯು ನಿರ್ದೇಶನ ನೀಡಲಾಯಿತು

**ಕ್ರಮ: ಸಮಿತಿಯ ಎಲ್ಲ ಸದಸ್ಯರಿಗೆ ಸಂಬಂಧಿಸಿದ ಇಲಾಖೆಗಳಲ್ಲಿ ಯಾವುದೇ ಸರ್ಕಾರಿ ದಾಖಲೆಗಳಲ್ಲಿ ಅರಣ್ಯವೆಂದು ದಾಖಲಿರುವ ಅರಣ್ಯ ಪ್ರದೇಶಗಳನ್ನು ಕ್ರೋಢಿಕರಿಸಿ ಸಲ್ಲಿಸುವುದು.**

ಮುಂದುವರೆದು, ಅರಣ್ಯ ತರಹದ ಪ್ರದೇಶಗಳು ಅಂದರೆ, ಡೀಮ್ಡ್ ಅರಣ್ಯ ಪ್ರದೇಶಗಳ ಬಗ್ಗೆ ಮಾನ್ಯ ಕರ್ನಾಟಕ ಸರ್ಕಾರದ ಆದೇಶ FEE 185 FAF 2011, BNG, Dated: 15-05-2014 ರ ಪ್ರಕಾರ ಈಗಾಗಲೇ ತಜ್ಞ ಸಮಿತಿಯನ್ನು ರಚಿಸಿ, ಸದರಿ ಆದೇಶದಲ್ಲಿರುವ ಮಾನದಂಡಗಳನ್ವಯ ಡೀಮ್ಡ್ ಅರಣ್ಯ ಪ್ರದೇಶವನ್ನು ಗುರುತಿಸಿ ಸರ್ಕಾರಕ್ಕೆ ಸಲ್ಲಿಸಿದ್ದು ಇರುತ್ತದೆ. ಅದರನ್ವಯ, ಸದರಿ ಕರ್ನಾಟಕ ಸರ್ಕಾರವು 05-05-2022 ರಂದು ಅಂತಿಮ ಡೀಮ್ಡ್ ಅರಣ್ಯ ಪ್ರದೇಶದ ಪಟ್ಟಿಯನ್ನು ಬಿಡುಗಡೆ ಮಾಡಿರುತ್ತಾರೆ. ಆದರೆ, ಸದರಿ ಪಟ್ಟಿಯಲ್ಲಿ ರಾಜ್ಯಾದಂತ ಕೆಲವು ನ್ಯೂನ್ಯತೆಗಳು ಕಂಡುಬಂದಿರುತ್ತವೆ. ಅವುಗಳೆಂದರೆ.

**ಅ**. ಕೆಲವೊಂದಿಷ್ಟು ಪಟ್ಟಿಯಲ್ಲಿರುವ ಪ್ರದೇಶಗಳು ಡೀಮ್ಡ್ ಮಾನದಂಡಗಳನ್ನು ಹೊಂದಿರುವುದಿಲ್ಲ.

**ಆ**. ಕೆಲವೊಂದಿಷ್ಟು ಪ್ರದೇಶಗಳು ಡೀಮ್ಡ್ ಮಾನದಂಡಗಳನ್ನು ಹೊಂದಿದ್ದರೂ ಪಟ್ಟಿಯಿಂದ ಕೈಬಿಡಲಾಗಿರುತ್ತದೆ.

**ಇ**. ಕೆಲವೊಂದಿಷ್ಟು ಅಧಿಸೂಚಿತ ಅರಣ್ಯಗಳು ಸಹ ಈ ಪಟ್ಟಿಯಲ್ಲಿರುತ್ತವೆ.

**ಈ**. ಕೆಲವೊಂದಿಷ್ಟು ಪ್ರಕರಣದಲ್ಲಿ ನಿಖರವಾದ ಭೂಮಿಯ ವಿಸ್ತೀರ್ಣವನ್ನು ಸಲ್ಲಿಸಿರುವುದಿಲ್ಲ.

ಕಾರಣ, ಸರ್ಕಾರದ ಆದೇಶದ ಪ್ರಕಾರ, ಸದರಿ ತಾಲೂಕು ಮಟ್ಟದ ಜಂಟಿ ಸರ್ವೆ ತಂಡ ಮತ್ತು ಜಂಟಿ ತಪಾಸಣಾ ತಂಡಗಳನ್ನು ರಚಿಸಬೇಕಿದ್ದು, ಸದರಿ ತಾಲೂಕು ಮಟ್ಟದ ಸಮಿತಿಯ ತಂಡಗಳು ಎಲ್ಲ ಡೀಮ್ಡ್ ಅರಣ್ಯ ಪ್ರದೇಶಗಳಿಗೆ ಭೇಟಿ ನೀಡಿ, ಮಾನದಂಡಗಳನ್ನು ಹೊಂದಿರದೇ ಇರುವ ಪ್ರದೇಶಗಳನ್ನು ಕಡಿಮೆ ಮಾಡಲು, ಮಾನದಂಡಗಳನ್ನುಹೊಂದಿದ್ದರೂ ಪಟ್ಟಿಯಲ್ಲಿ ಕೈಬಿಡಲಾಗಿರುವ ಪ್ರದೇಶಗಳನ್ನು ಸೇರಿಸಲು, ಈಗಾಗಲೇ ಘೋಷಣೆಯಾಗಿರುವ ಅಧಿಸೂಚಿತ ಅರಣ್ಯಗಳನ್ನು ಪಟ್ಟಿಯಿಂದ ಕಡಿಮೆ ಮಾಡಲು ಹಾಗೂ ನಿಖರವಾದ ಡೀಮ್ಡ್ ಅರಣ್ಯ ಪ್ರದೇಶದ ವಿಸ್ತೀರ್ಣವನ್ನು ಸಲ್ಲಿಸಲು ಸರ್ಕಾರದ ಆದೇಶದಲ್ಲಿ ಸೂಚಿಸಲಾಗಿದೆ ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿ, ಧಾರವಾಡ ರವರು ವಿವರಿಸಿದರು. ಮುಂದುವರೆದು, ಸದರಿ ಈ ಕಾರ್ಯವನ್ನು ಇನ್ನೂ 02 ವಾರಗಳಲ್ಲಿ KSRSAC (ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ) ದವರು ನಕಾಶೆ ಮತ್ತು ಸಂಬಂಧಿಸಿದ ದಾಖಲೆಗಳನ್ನು ನೀಡಲಿದ್ದು, ಅದನ್ನು ನೀಡಿದ ಮೇಲೆ ಸದರಿ ಕಾರ್ಯವನ್ನು ಕೈಗೊಳ್ಳಲು ಮಾನ್ಯ ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ, ಕರ್ನಾಟಕ ಸರ್ಕಾರ ರವರು ಸೂಚಿಸಿರುವುದಾಗಿ ಸಭೆಗೆ ತಿಳಿಸಿದರು. KSRSAC ರವರು ನಕಾಶೆ ಮತ್ತು ಸಂಬಂಧಿಸಿದ ದಾಖಲೆಗಳನ್ನು ನೀಡಿದ ತಕ್ಷಣವೇ ಸಮಿತಿಯ ಎಲ್ಲ ಸದಸ್ಯರು 2014 ರ ಆದೇಶದ ಮಾನದಂಡಗಳನ್ನು ಗಮನದಲ್ಲಿಟುಕೊಂಡು ಡೀಮ್ಡ್ ಅರಣ್ಯ ಪಟ್ಟಿಯನ್ನು ಪರಿಶೀಲಿಸಿ, ಪಟ್ಟಿಯಿಂದ ಕೈಬಿಡುವ ಮತ್ತು ಸೇರಿಸುವ ಪ್ರದೇಶಗಳನ್ನು ಅಂತಿಮಗೊಳಿಸಿ ಸಲ್ಲಿಸಬೇಕೆಂದು ಸಮಿತಿಯು ಎಲ್ಲ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಯಿತು

**ಕ್ರಮ: ಸಮಿತಿಯ ಎಲ್ಲ ಸದಸ್ಯರಿಗೆ.**

ಮುಂದುವರೆದು, ಮಾನ್ಯ ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ, ಕರ್ನಾಟಕ ಸರ್ಕಾರ ಡೀಮ್ಡ್ ಅರಣ್ಯ ಪ್ರದೇಶಗಳನ್ನು ತಾಲೂಕು ಮಟ್ಟದಲ್ಲಿ ಜಂಟಿ ತಪಾಸಣೆ ಹಾಗೂ ಜಂಟಿ ಮೋಜಣಿ ಮಾಡಲು ತಂಡಗಳನ್ನು ರಚಿಸಲು ಸೂಚಿಸಿದ್ದರ ಬಗ್ಗೆ ಉಪ ಅರಣ್ಯ ಸಂರಕ್ಷಣಾಧಿಕಾರಿ, ಧಾರವಾಡ ರವರು ಮಾಹಿತಿ ನೀಡಿದರು. ಸದರಿ ತಂಡಗಳ ಕಾರ್ಯನಿರ್ವಹಣೆ ಕುರಿತು ಸಮಿತಿಯ ಎಲ್ಲ ಅಧಿಕಾರಿಗಳಿಗೆ ಮಾಹಿತಿ ನೀಡಲಾಯಿತು. ಸಮಿತಿಯು ಸದರಿ ತಂಡಗಳನ್ನು ಈ ಕೆಳಕಂಡಂತೆ ರಚಿಸಿದೆ.

| **1. ತಾಲೂಕು ಮಟ್ಟದ ಜಂಟಿ ತಪಾಸಣಾ ತಂಡ (Joint Verification Team- JV Team)** | | |
|---|---|---|
| **ಕ್ರ ಸಂ** | **ಅಧಿಕಾರಿ/ಸಿಬ್ಬಂಧಿ** | **ಇಲಾಖೆ** |
| **01** | ತಹಶೀಲ್ದಾರರು | ಕಂದಾಯ |
| **02** | ವ್ಯಾಪ್ತಿಗೆ ಸಂಬಂಧಿಸಿದ ವಲಯ ಅರಣ್ಯಾಧಿಕಾರಿಗಳು | ಅರಣ್ಯ |
| **03** | ಸಹಾಯಕ ನಿರ್ದೇಶಕರು, ಭೂದಾಖಲೆ | ಸರ್ವೇ ಸೆಟಲ್ಮೆಂಟ್ & ಭೂ ದಾಖಲೆಗಳು. |
| **04** | ತಾಲೂಕು ಪಂಚಾಯತಿಯ ಕಾರ್ಯ ನಿರ್ವಾಹಕ ಅಧಿಕಾರಿಗಳು | ಆರ್.ಡಿ.ಪಿ.ಆರ್ |

| **2. ಜಂಟಿ ತಪಾಸಣಾ ತಂಡಕ್ಕೆ ಸಹಾಯ ಮಾಡಲು ತಾಲೂಕು ಮಟ್ಟದ ಜಂಟಿ ಸರ್ವೆ ತಂಡ (Joint Survey Team- JS - Team to assist Joint Verification team)** | | |
|---|---|---|
| **ಕ್ರ ಸಂ** | **ಅಧಿಕಾರಿ/ಸಿಬ್ಬಂಧಿ** | **ಇಲಾಖೆ** |
| **01** | ವ್ಯಾಪ್ತಿಗೆ ಸಂಬಂಧಿಸಿದ ಸಂಭಂಧಿಸಿದ **ಗ್ರಾಮ ಲೆಕ್ಕಾಧಿಕಾರಿ** | ಕಂದಾಯ |
| **02** | ವ್ಯಾಪ್ತಿಗೆ ಸಂಬಂಧಿಸಿದ **ಉಪ ವಲಯ ಅರಣ್ಯಾಧಿಕಾರಿ ವ ಮೋಜಣಿದಾರ** | ಅರಣ್ಯ |
| **03** | ವ್ಯಾಪ್ತಿಗೆ ಸಂಬಂಧಿಸಿದ **ಕಂದಾಯ ಸರ್ವೇಯರ್ ಅಥವಾ ಎಸ್‌ಎಸ್‌ಎಲ್‌ಆರ್ ಸರ್ವೇಯರ್** | ಸರ್ವೇ ಸೆಟಲ್ಮೆಂಟ್ & ಭೂ ದಾಖಲೆಗಳು. |
| **04** | ವ್ಯಾಪ್ತಿಗೆ ಸಂಬಂಧಿಸಿದ **ಪಂಚಾಯತ್ ಅಭಿವೃಧ್ಧಿ ಅಧಿಕಾರಿ** | ಆರ್.ಡಿ.ಪಿ.ಆರ್ |

ತಾಲೂಕು ಮಟ್ಟದ ಜಂಟಿ ಸರ್ವೇ ತಂಡವು ಮಾನ್ಯ ಕರ್ನಾಟಕ ಸರ್ಕಾರದ ಆದೇಶ **FEE 185 FAF 2011, BNG, Dated: 15-05-2014** ರ ಮಾನದಂಡಗಳನ್ವಯ ಸ್ಥಳ ಪರಿಶೀಲಿಸಿ ದೃಡೀಕೃತ ನಕಾಶೆ ಹಾಗೂ ವರದಿಯನ್ನು ತಾಲೂಕು ಮಟ್ಟದ ಜಂಟಿ ತಪಾಸಣಾ ತಂಡಕ್ಕೆ ಸಲ್ಲಿಸಲು ಸಮಿತಿಯು ಸೂಚಿಸಲಾಯಿತು.

ತಾಲೂಕು ಮಟ್ಟದ ಜಂಟಿ ತಪಾಸಣೆ ತಂಡವು, ಜಂಟಿ ಸರ್ವೇ ತಂಡವು ಸಲ್ಲಿಸಿರುವ ವರದಿಯಲ್ಲಿ ಹೊಸದಾಗಿ ಸೇರ್ಪಡೆಯಾಗಿರುವ ಪ್ರದೇಶ ಅಥವಾ ಕೈಬಿಟ್ಟ ಪ್ರದೇಶಗಳ ಪಟ್ಟಿಯಿಂದ ಕನಿಷ್ಟ 20% ಪ್ರದೇಶಗಳ ಸ್ಥಾನಿಕ ಪರಿಶೀಲನೆ ಮಾಡಿ ದೃಢೀಕೃತ ನಕಾಶೆ ಹಾಗೂ ವರದಿಯನ್ನು ಜಿಲ್ಲಾ ಮಟ್ಟದ ಜಂಟಿ ಸಮಿತಿಗೆ ಸಲ್ಲಿಸಲು ಸಮಿತಿಯು ನಿರ್ದೇಶನ ನೀಡಲಾಯಿತು

**ಕ್ರಮ: ಸಮಿತಿಯ ಎಲ್ಲ ಸದಸ್ಯರಿಗೆ, ಮುಖ್ಯವಾಗಿ ಎಲ್ಲ ತಾಲೂಕಾ ಅಧಿಕಾರಿಗಳಿಗೆ.**

ಮುಂದುವರೆದು, ಜಿಲ್ಲಾಮಟ್ಟದ ಜಂಟಿ ಸಮಿತಿಯ ಅಂತಿಮ ವರದಿಯನ್ನು ಪರಿಶೀಲಿಸಿ, ಜಿಲ್ಲಾ ಉಸ್ತುವಾರಿ ಸಚಿವರ ಗಮನಕ್ಕೆ ತಂದು ಅವರಿಂದ ಒಪ್ಪಿಗೆ ಪಡೆದು ಜಿಲ್ಲಾ ಮಟ್ಟದ ತ್ರೈಮಾಸಿಕ ಕೆಡಿಪಿ ಸಭೆಯಲ್ಲಿ ಅನುಮೋದನೆಗೊಂಡ ನಂತರ ವಿಭಾಗಿಯ ಕಂದಾಯ ಸಮಿತಿಗೆ ಸಲ್ಲಿಸುವುದು ಎಂಧು ಸಮಿತಿಯು ತಿರ್ಮಾನಿಸಲಾಯಿತು.

**ಕ್ರಮ: ಸಮಿತಿಯ ಎಲ್ಲ ಸದಸ್ಯರಿಗೆ.**

ಮುಂದುವರೆದು, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಸದರಿ ಸಮಿತಿಗೆ ಸಂಬಂಧಿಸಿದ ಎಲ್ಲ ದಾಖಲಾತಿಗಳನ್ನು, ಸಾಫ್ಟ ಕಾಪಿಗಳನ್ನು ಅಥವಾ ಯಾವುದೇ ಮಾಹಿತಿ ನೀಡಲು ಮತ್ತು ಸಂಪರ್ಕಿಸಲು ವಾಟ್ಸಪ್ ಗ್ರೂಪ್ ರಚನೆ ಮಾಡಲು ಸಮಿತಿಗೆ ಮನವಿ ಮಾಡಿದರು. ಸದರಿ ಮನವಿಗೆ ಸಮಿತಿಯು ಅನುಮತಿಯನ್ನು ನೀಡಿ, ಮೇಲ್ಕಾಣಿಸಿದ ಎಲ್ಲ ಕ್ರಮಗಳನ್ನು ಕೈಗೊಂಡು ಮುಂದಿನ ಸಭೆಯಲ್ಲಿ ಸಮಿತಿಯ ಮುಂದೆ ಮಂಡಿಸಲು ಎಲ್ಲ ಸಮಿತಿಯ ಸದಸ್ಯರಿಗೆ ಸೂಚಿಸಿದರು.

ಸದರಿ ಸಭೆಯನ್ನು ವಂದನಾರ್ಪಣೆಯೊಂದಿಗೆ ಮುಕ್ತಾಯಗೊಳಿಸಲಾಯಿತು.

ಜಿಲ್ಲಾಧಿಕಾರಿಗಳು
ಹಾಗೂ ಜಿಲ್ಲಾ ದಂಡಾಧಿಕಾರಿಗಳು,
ಧಾರವಾಡ ಜಿಲ್ಲೆ
ಹಾಗೂ ಅಧ್ಯಕ್ಷರು
ಜಿಲ್ಲಾ ಮಟ್ಟದ ತಜ್ಞ ಸಮಿತಿ.

ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ, ಧಾರವಾಡ
ಹಾಗೂ ಸದಸ್ಯರು,
ಜಿಲ್ಲಾ ಮಟ್ಟದ ತಜ್ಞ ಸಮಿತಿ.

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
ಧಾರವಾಡ ವಿಭಾಗ, ಧಾರವಾಡ
ಹಾಗೂ ಸಂಚಾಲಕರು,
ಜಿಲ್ಲಾ ಮಟ್ಟದ ತಜ್ಞ ಸಮಿತಿ

ಉಪ ನಿರ್ದೇಶಕರು,
ಭೂದಾಖಲೆ,
ಹಾಗೂ ಸದಸ್ಯರು,
ಜಿಲ್ಲಾ ಮಟ್ಟದ ತಜ್ಞ ಸಮಿತಿ.

ಜಂಟಿ ನಿರ್ದೇಶಕರು,
ಸಮಾಜ ಕಲ್ಯಾಣ ಇಲಾಖೆ,,
ಹಾಗೂ ಸದಸ್ಯರು,
ಜಿಲ್ಲಾ ಮಟ್ಟದ ತಜ್ಞ ಸಮಿತಿ.

ಉಪ ನಿರ್ದೇಶಕರು,
ತೋಟಗಾರಿಕೆ ಇಲಾಖೆ
ಹಾಗೂ ಸದಸ್ಯರು,
ಜಿಲ್ಲಾ ಮಟ್ಟದ ತಜ್ಞ ಸಮಿತಿ